ಕರ್ನಾಟಕ ಸರ್ಕಾರ

# ಸವಿ ಕನ್ನಡ

## ಪ್ರಥಮ ಭಾಷೆ ಕನ್ನಡ

## ಅಭ್ಯಾಸ ಸಹಿತ ಪಠ್ಯಪುಸ್ತಕ

## ಭಾಗ–2

೧

## ಒಂದನೆಯ ತರಗತಿ

@KTBS
NOT TO BE REPUBLISHED

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
೬ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–೫೬೦ ೦೦೩.

# ಪರಿವಿಡಿ

N8A3E5


| ಕ್ರ.ಸಂ | ಗದ್ಯ – ಪದ್ಯಗಳು | ಕೃತಿಕಾರರ ಹೆಸರು | ಪುಟ ಸಂಖ್ಯೆ |
|---|---|---|---|
| ೯ | ಚಂದಿರನೇತಕೆ ಓಡುವನಮ್ಮ (ಪದ್ಯ)... | ನೀ.ರೇ. ಹಿರೇಮಠ | ೦೨ |
| ೧೦ | ಗುಣಿತಾಕ್ಷರಗಳು ................................ | ಸಮಿತಿ ರಚನೆ | ೦೫ |
| ೧೧ | ವಿವೇಕಾನಂದರ ಜನುಮ ದಿನ........... | ಸಮಿತಿ ರಚನೆ | ೨೮ |
| ೧೨ | ಒತ್ತಕ್ಷರಗಳು........................................ | ಸಮಿತಿ ರಚನೆ | ೩೪ |
| ೧೩ | ಅಬ್ಬಾಸ್ ಹಣ್ಣಿನ ಅಂಗಡಿ ................ | ಸಮಿತಿ ರಚನೆ | ೪೬ |
| ೧೪ | ಮೊಲದ ಮರಿ (ಪದ್ಯ)...................... | ಕೆಮ್ಮೂರು ದೊಡ್ಡಣ್ಣ ಶೆಟ್ಟಿ | ೫೩ |
| ೧೫ | ಶಂಕರಪ್ಪನ ಮನೆ ............................. | ಸಮಿತಿ ರಚನೆ | ೫೬ |
| ೧೬ | ಕೈ ತೊಳೆಯಬೇಕು............................ | ಸಮಿತಿ ರಚನೆ | ೬೦ |
| ೧೭ | ಸಿಗಡಿ ಯಾಕೆ ಒಣಗಲಿಲ್ಲ? ................. | ಪಂಜೆ ಮಂಗೇಶರಾಯ | ೬೪ |


@KTBS NOT TO BE REPUBLISHED

# ತೋರಿಸಿ – ಹೇಳಿಸಿ

## (ಪಾಠ – ೯ : ಪಾಠಪೂರ್ವ ಚಟುವಟಿಕೆ)

### ಅ) ಚಿತ್ರ ತೋರಿಸಿ ಪದ ಹೇಳಿಸಿ.


ಆಗಸ


ಚಂದಿರ


ರವಿ


ತಾರೆ


ಮೋಡ


ಮನೆ


ದೀಪ


ನೀರಿನ ಅಲೆ

@KTBS NOT TO BE REPUBLISHED

ಪಾಠ ೯

# ಚಂದಿರನೇತಕೆ ಓಡುವನಮ್ಮ (ಪದ್ಯ)

X4Y2S4

ಕವಿ : ನೀ.ರೇ. ಹಿರೇಮಠ

(ಈ ಪದ್ಯವನ್ನು ರಾಗವಾಗಿ ಹಾಡಿ, ಮಕ್ಕಳಿಂದ ಹಾಡಿಸಿ)



ಚಂದಿರನೇತಕೆ ಓಡುವನಮ್ಮ
ಮೋಡಕೆ ಹೆದರಿಹನೇ

ಬೆಳ್ಳಿಯ ಮೋಡದ ಅಲೆಗಳ ಕಂಡು
ಚಂದಿರ ಬೆದರಿಹನೇ

ಹಿಂಜಿದ ಅರಳೆಯು ಗಾಳಿಗೆ ಹಾರಿ
ಮೋಡಗಳಾಗಿಹವೇ

ಅರಳೆಯು ಮುತ್ತಿ ಮೈಯನು ಸುತ್ತಿ
ಚಂದ್ರನ ಬಿಗಿಯುವವೆ?

ಮಂಜಿನ ಗಡ್ಡೆಯ ಮೋಡವು ಕರಗಲು
ಚಂದಿರ ನಗುತಿಹನು

ಕರಗಿದ ಮೋಡದ ಸೆರೆಯನು
ಹರಿಯುತ ಬಾನಲಿ ತೇಲುವನು

ಚಂದಿರನೆನ್ನಯ ಗೆಳೆಯನು
ಅಮ್ಮಾ ನನ್ನೊಡನಾಡುವನು

@KTBS NOT TO BE REPUBLISHED

ನಾನೂ ಓಡಲು ತಾನೂ ಓಡುವ
ಚೆನ್ನಿಗ ಚಂದಿರನು

ಬಾ ಬಾ ಚಂದಿರ ಬೆಳ್ಳಿಯ ಚಂದಿರ
ನಮ್ಮಯ ಮನೆಗೀಗ

ನಿನ್ನಯ ಬೆಳಕನು ಎಲ್ಲೆಡೆ ಚೆಲ್ಲಿ
ಮನವನು ಬೆಳಗೀಗ.

**ಓದಿ ಹೇಳಿ :**

ಚಂದಿರ, ಓಡು, ಮೋಡ, ಹೆದರಿ, ಬೆಳ್ಳಿ, ಅಲೆ, ಕಂಡು, ಬೆದರಿಹ, ಹಿಂಜಿದ, ಅರಳೆ, ಗಾಳಿ, ಹಾರಿ, ಮುತ್ತಿ, ಮೈ, ಸುತ್ತಿ, ಬಿಗಿ, ಮಂಜಿನಗಡ್ಡೆ, ಕರಗು, ನಗು, ಸೆರೆ, ಹರಿ, ಬಾನು, ತೇಲು, ಎನ್ನಯ, ಗೆಳೆಯ, ಅಮ್ಮಾ, ನನ್ನೊಡನೆ, ಆಡು, ನಾನು, ತಾನು, ಚೆನ್ನಿಗ, ನಮ್ಮ, ಮನೆ, ಬೆಳಕು, ಎಲ್ಲೆಡೆ, ಚೆಲ್ಲಿ, ಮನ, ಬೆಳಗು.

@KTBS NOT TO BE REPUBLISHED

## ಅಭ್ಯಾಸ

**ಅ) ಪದ್ಯದ ಸಾಲುಗಳಲ್ಲಿ ಬಿಟ್ಟಿರುವ ಪದವನ್ನು ಮಕ್ಕಳಿಂದ ಹೇಳಿಸಿ.**

೧) ಬೆಳ್ಳಿಯ ಮೋಡದ ________ ಕಂಡು
ಚಂದಿರ ಬೆದರಿಹನೇ

೨) ಅರಳೆಯು ಮುತ್ತಿ ________ ಸುತ್ತಿ
ಚಂದ್ರನ ಬಿಗಿಯುವವೆ?

೩) ಮಂಜಿನ ________ ಮೋಡವು ಕರಗಲು
ಚಂದಿರ ನಗುತಿಹನು

೪) ನಾನೂ ಓಡಲು ತಾನೂ ಓಡುವ
________ ಚಂದಿರನು

ಆ) ಪದ್ಯದ ಒಂದು ಸಾಲನ್ನು ನೀಡಿದೆ, ಮುಂದಿನ ಸಾಲನ್ನು ಮಕ್ಕಳಿಂದ ಹೇಳಿಸಿ.

ಅ) ಚಂದಿರನೇತಕೆ ಓಡುವನಮ್ಮ

______________________________

ಆ) ಹಿಂಜಿದ ಅರಳೆಯು ಗಾಳಿಗೆ ಹಾರಿ

______________________________

ಇ) ಕರಗಿದ ಮೋಡದ ಸೆರೆಯನು ಹರಿಯುತ

______________________________

ಇ) ಪದ್ಯದಲ್ಲಿ ಬಳಕೆಯಾಗಿರುವ ಕೆಲವು ಪದಗಳನ್ನು ನೀಡಲಾಗಿದೆ. ಈ ಪದಗಳನ್ನು ಓದಿ, ಮಕ್ಕಳಿಂದ ಹೇಳಿಸಿ.

| | | | |
|---|---|---|---|
| ಚಂದಿರ | ಮೋಡ | ಅಲೆ | ಅರಳೆ |
| ಗಾಳಿ | ನಗು | ಹರಿ | ಬಾನು |
| ಗೆಳೆಯ | ನಾನು | ಓಡು | ಮನೆ |
| ಬೆಳಕು | ಮನ | ಬೆಳಗು | |

ಈ) ಚಿತ್ರಗಳನ್ನು ತೋರಿಸಿ, ಅವು ಏನೆಂದು ಮಕ್ಕಳನ್ನು ಪ್ರಶ್ನಿಸಿ ಉತ್ತರ ಪಡೆಯಿರಿ.













@KTBS
NOT TO BE REPUBLISHED

ಪಾಠ ೧೦

# ಗುಣಿತಾಕ್ಷರಗಳು

– ಸಮಿತಿ ರಚನೆ

## (ಪಾಠಪೂರ್ವ ಚಟುವಟಿಕೆ)

ಅ) ಚಿತ್ರ ತೋರಿಸಿ ಪದ ಹೇಳಿಸಿ.

ಕ



ಕಮಲ

ಕಾ



ಕಾಗೆ

ಕಿ



ಕಿಟಕಿ

ಕೀ



ಕೀಟ

@KTBS NOT TO BE REPUBLISHED

ಕು



ಕುರಿ

ಕೂ



ಕೂಸು

ಕೃ



ಕೃಷಿ

ಕೆ



ಕೆರೆ

ಕೇ



ಕೇಸರಿ

ಕೈ



ಕೈ

ಕೊ



ಕೊಡ

ಕೋ



ಕೋತಿ

ಕೌ



ಕೌದಿ

© NOT TO BE REPUBLISHED

# ಗುಣಿತಾಕ್ಷರಗಳು–೧

## ತಲೆಕಟ್ಟು–ಇಳಿ–ಗುಡಿಸು–ಗುಡಿಸಿನ ದೀರ್ಘ

ಅ) ಚಿತ್ರ ತೋರಿಸಿ ಪದ ಹೇಳಿಸಿ.



ರಥ



ನಾಯಿ



ಗಿಳಿ



ದೀಪ

@KTBS
NOT TO BE REPUBLISHED

ಆ) ಕೊಟ್ಟಿರುವ ಪದಗಳನ್ನು ಗುಂಡಾಗಿ ನಕಲು ಮಾಡಿಸಿ.

| | | | | |
|---|---|---|---|---|
| ಾ ತಲೆಕಟ್ಟು | ಕರ | ಖಗ | ಘನ | ಚಟ |
| | | | | |
| | ಛಂದ | ತಡ | ರಥ | ಧನ |
| | | | | |

| | | | | |
|---|---|---|---|---|
| ಾ ಇಳಿ | ಕಾಲ | ಗಾನ | ಜಾಣ | ಚಾಚಾ |
| | | | | |
| | ಡಾಬಾ | ತಾತಾ | ಪಾಯಸ | ಟಾಂಟಾಂ |
| | | | | |

| | | | | |
|---|---|---|---|---|
| ಿ ಗುಡಿಸು | ಗಿಳಿ | ಜಾಜಿ | ಇಣಚಿ | ಕಿಟಕಿ |
| | | | | |
| | ಗಿರಿ | ದಿನ | ಗಾಡಿ | ಪಿರಿಪಿರಿ |
| | | | | |

| | | | | |
|---|---|---|---|---|
| ೀ ಗುಡಿಸಿನ ದೀರ್ಘ | ಗೀಗೀ | ಚೀಟಿ | ಜೀಜೀ | ಕೀಟ |
| | | | | |
| | ಠೀವಿ | ತೀರ | ದೀಪ | ಪೀಪೀ |
| | | | | |

@KTBS NOT TO BE REPUBLISHED

## ಅಭ್ಯಾಸ

ಅ) ನೀಡಿರುವ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.

| | | | | |
|---|---|---|---|---|
| ನರಿ | ಗಿಳಿ | ಇಲಿ | ಕಿವಿ | |
| ರಾಜ | ಲಾರಿ | ವಾಣಿ | ಹಾರ | ನಾಯಿ |
| ಮಿಠಾಯಿ | ಕಾಯಿ | ಹಾನಿ | ಕಾಳಿ | ಯಾಗ |
| ಬೀಗ | ರೀತಿ | ಲೀಲ | ವೀರ | ಶೀತ |

ಆ) ನೀಡಿರುವ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಮತ್ತು ಬರೆಯಲು ಹೇಳಿ.

| | | | |
|---|---|---|---|
| ಬಾಯಿ | ಬಿಳಿ | ಗಿರಿ | ಲಾಲಿ |
| ಲೀಲ | ವಾಣಿ | ವಿನಯ | ವೀಣ |
| ಶಾಕ | ಶಿವ | ಸೀಸ | ಸಾಲ |
| ಸಿಹಿ | ಸೀತ | ಹಾದಿ | ಹಿಮ |
| ಬೀರ | ಹಳಿ | ಬಿಳಿ | ಬೀದಿ |

@KTBS NOT TO BE REPUBLISHED

ಇ) ಕೊಟ್ಟಿರುವ ವಾಕ್ಯಗಳನ್ನು ಓದಿಸಿ, ಬರೆಯಿಸಿ.

ಸಾವಿರ ಹಾಡಿನ ಸರದಾರ

ಕಿಟಕಿಯ ಬಳಿ ಚಿಮಣಿ ದೀಪ

ಸೀತಾಳ ತಂಗಿ ನೀತಾ

ನೀತಾ ಪೀಪೀ ತಾ

@KTBS NOT TO BE REPUBLISHED

# ಗುಣಿತಾಕ್ಷರಗಳು–೨

## ಕೊಂಬು–ಕೊಂಬಿನಿಳಿ–ವಟ್ಟಸುಳಿ

ಅ) ಚಿತ್ರ ತೋರಿಸಿ ಪದ ಹೇಳಿಸಿ.



ಹುಲಿ



ಹೂಜಿ



ಗೃಹ

@KTBS NOT TO BE REPUBLISHED

ಆ) ಕೊಟ್ಟಿರುವ ಪದಗಳನ್ನು ಗುಂಡಾಗಿ ನಕಲು ಮಾಡಿಸಿ.

| | | | | |
|---|---|---|---|---|
| ು ಕೊಂಬು | ಕುಸುರಿ | ಗುರು | ಚುರುಮುರಿ | ಚುಟುಕು |
| | | | | |
| | ತುರುಬು | ಧುರೀಣ | ಡುಮುಕಿ | ಪುನುಗು |
| | | | | |
| | ಯುವ | ರುಜು | ಲುಂಗಿ | ಹಾವು |
| | | | | |

| | | | | |
|---|---|---|---|---|
| ೂ ಕೊಂಬಿನಿಳಿ | ಕೂಸು | ಗೂಡು | ಚೂರು | ಜೂಲು |
| | | | | |
| | ಕಡೂರು | ತೂತು | ದೂರು | ನೂರು |
| | | | | |
| | ಪೂರಿ | ಯೂಪ | ರೂಪ | ಲೂನ |
| | | | | |

| | | | | |
|---|---|---|---|---|
| ೃ ವಟ್ಟೆಸುಳಿ | ಕೃತಿ | ಗೃಹ | ತೃಣ | ಧೃತಿ |
| | | | | |
| | ನೃಪ | ಭೃಂಗ | ಮೃಡ | ವೃಥಾ |
| | | | | |
| | ಶೃಂಗ | ಸೃಜನ | ಹೃದಯ | ಘೃತ |
| | | | | |

© KTBS NOT TO BE REPUBLISHED

## ಅಭ್ಯಾಸ

ಅ) **ನೀಡಿರುವ ಪದಗಳನ್ನು ಗುರುತಿಸಿ, ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.**

ಕುರಿ, ಗುರಿ, ಚುರುಕು, ಕುಟುಕು, ಡುಮುಕಿ, ತುರುಸು, ನುಣುಪು,

ಬುಗುರಿ, ಮುನಿ, ರುಜು, ಹುಳಿ, ಸುಗುಣ, ಭುವನ, ಋಷಿ.

ಆ) ನೀಡಿರುವ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಹಾಗೂ ಬರೆಯಲು ಹೇಳಿ.

| | | | |
|---|---|---|---|
| ಕೂಪ | ಗೂಡು | ಚೂಪು | ಜೂಲಿ |
| ತೂರು | ದೂರ | ನೂರು | ಪೂರಿ |
| ಮೂರುತಿ | ರೂಮು | ಲೂನ | ಶೂರ |
| ಹೂಡು | ಧೂಪ | ಭೂಮ | ಖೂಳ |

ಇ) ಕೊಟ್ಟಿರುವ ವಾಕ್ಯಗಳನ್ನು ಓದಿಸಿ, ಬರೆಯಿಸಿ.

ಇಲಿಯ ಕಿವಿ ಕಿರಿದು.

@KTBS NOT TO BE REPUBLISHED

ಬುಗುರಿ ಗಿರಿಗಿರಿ ತಿರುಗಿತು.

ಹೂಜಿಯ ನೀರು ಕುಡಿಯಿರಿ.

ಫಾತಿಮಾ ಚೂಟಿ ಹುಡುಗಿ.

@KTBS
NOT TO BE REPUBLISHED

ಕೂಸಿನ ನಗು ಕಿಲಕಿಲ.

ನೃಪನ ಹೃದಯ ಡವಡವ.

# ಗುಣಿತಾಕ್ಷರಗಳು–೩

## ಎತ್ವ–ಏತ್ವ–ಐತ್ವ

ಅ) ಚಿತ್ರ ತೋರಿಸಿ ಪದ ಹೇಳಿಸಿ.



ಕೆರೆ



ಮೇಕೆ



ಸೈನಿಕ

@KTBS NOT TO BE REPUBLISHED

### ಅಭ್ಯಾಸ

ಅ) ಕೊಟ್ಟಿರುವ ಪದಗಳನ್ನು ಗುಂಡಾಗಿ ನಕಲು ಮಾಡಿಸಿ.

| | | | | |
|---|---|---|---|---|
| ೆ ಎತ್ವ | ಕೆರೆ | ಗೆಳೆಯ | ಚೆಲುವ | ಹೆಡೆ |
| | | | | |
| | ಎಡೆ | ಬೆಣೆ | ತೆನೆ | ದೆಸೆ |
| | | | | |
| | ಪೆರೆ | ಮೆರೆ | ಬೆಲೆ | ಹವೆ |
| | | | | |

| ೀ<br>ಏತ್ವ<br>(ಎತ್ವ+ದೀರ್ಘ) | | | | |
|---|---|---|---|---|
| | ಕೇರೆ | ಗೇರು | ಚೇಳು | ಜೇಡ |
| | | | | |
| | ಟೇಪು | ಡೇರೆ | ತೇರು | ದೇವಿ |
| | | | | |
| | ನೇರಳೆ | ಪೇಟೆ | ಬೇಟೆ | ಮೇಕೆ |
| | | | | |

| ೈ<br>ಐತ್ವ | | | | |
|---|---|---|---|---|
| | ಕೈ | ಗೈರು | ಚೈನು | ಜೈಲು |
| | | | | |
| | ಟೈರು | ಡೈರಿ | ತೈಲ | ದೈವ |
| | | | | |
| | ಮೈ | ಪೈರು | ಬೈಗು | ನೈದಿಲೆ |
| | | | | |

@KTBS NOT TO BE REPUBLISHED

## ಅಭ್ಯಾಸ

ಅ) ನೀಡಿರುವ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಹೇಳಿ.

ಸೆಳೆ, ಸೇರು, ಸೈನಿಕ, ಹೆರಳು, ಹೇಮ, ಹೈದ, ಸೆಖೆ, ಉಘೇ, ಪೇಡೆ, ರಂಭೆ, ಐದು, ಭೈರವ, ಮೈಸೂರು, ಹೈದರ, ಲೈಲ, ವೈರಿ, ಶೈವ, ಬೈಗು.

ಆ) ನೀಡಿರುವ ಪದಗಳನ್ನು ಗುಂಡಾಗಿ ಬರೆಯಲು ಹೇಳಿ.

| | | | |
|---|---|---|---|
| ಕೆನೆ | ಕೇಳು | ಕೈದು | ಗೆಳೆಯ |
| ಗೇಟು | ಚೇಳು | ಜೈನು | ಥೈಥಕ |
| ಮೈಮರೆ | ನೂರು | ಪೈಪು | ಕೈದಿ |

ಇ) ಕೊಟ್ಟಿರುವ ವಾಕ್ಯಗಳನ್ನು ಓದಿಸಿ, ಬರೆಯಿಸಿ.

ಕೆರೆಯ ಏರಿಯ ಮೇಲೆ ಮೇಕೆ ಇದೆ.

ಸೈನಿಕರು ದೇಶದ ಗಡಿ ಕಾಯುವರು.

ನೀರಿಗೆ ನೈದಿಲೆ ಶೃಂಗಾರ.

@KTBS NOT TO BE REPUBLISHED

# ಗುಣಿತಾಕ್ಷರಗಳು–೪

## ಒತ್ವ–ಓತ್ವ–ಔತ್ವ

ಅ) ಚಿತ್ರ ತೋರಿಸಿ ಪದ ಹೇಳಿಸಿ.



ಕೊಡೆ



ಡೋಲು



ನೌಕೆ

@KTBS NOT TO BE REPUBLISHED

ಆ) ಪದಗಳನ್ನು ಗುಂಡಾಗಿ ನಕಲು ಮಾಡಿಸಿ.

| | | | | |
|---|---|---|---|---|
| ೊ ಒತ್ವ | ಕೊಡೆ | ಗೊರವ | ಚೊಗ | ಜೊತೆ |
| | | | | |
| | ಟೊಮೆಟೊ | ತೊರೆ | ದೊರೆ | ನೊರೆ |
| | | | | |
| | ಪೊರೆ | ಮೊರೆ | ಬೊಂಬೆ | ಹೊರೆ |
| | | | | |

| ೊ ೋ ಓತ್ವ (ಓತ್ವ+ದೀರ್ಘ) | ಕೋರೆ | ಗೋಡೆ | ಚೋಟು | ಜೋಗುಳ |
|---|---|---|---|---|
| | | | | |
| | ಟೋಪಿ | ತೋಟ | ದೋರೆ | ನೋಟು |
| | | | | |
| | ಪೋರ | ಬೋರ | ಮೋಡ | ರೋಟಿ |
| | | | | |

| ೌ ಔತ್ವ | ಕೌರವ | ಗೌರವ | ಚೌಚೌ | ಜೌಗು |
|---|---|---|---|---|
| | | | | |
| | ಡೌಲು | ತೌರು | ದೌಡು | ಪೌರ |
| | | | | |
| | ಬೌಬೌ | ಮೌನ | ಯೌವನ | ಸೌಟು |
| | | | | |

@KTBS NOT TO BE REPUBLISHED

## ಅಭ್ಯಾಸ

ಅ) ನೀಡಿರುವ ಪದಗಳನ್ನು ಬರೆಯಲು ತಿಳಿಸಿ.

ಕೊಳೆ ಕೋಳಿ ಕೌತುಕ ಗೊರಗ

__________ __________ __________ __________

__________ __________ __________ __________

| | | | |
|---|---|---|---|
| ಗೋವು | ಗೌರಿ | ಚೋಳ | ಚೌಲ |
| ಜೋಗುಳ | ಜೌಗು | ಡೋಲು | ತೊಲೆ |
| ತೋರ | ತೌಳವ | ದೊಣೆ | ದೋಣಿ |
| ನೊಣ | ನೋಟ | ನೌಕೆ | ಪೊಸತು |
| ಪೋರ | ಪೌಳಿ | ಯೋಜನ | ಯೌವನ |
| ಲೋಕ | ಶೋಕಿ | ಶೌರಿ | ಸೊಗಸು |
| ಸೋರೆ | ಸೌತೆ | ಹೊಸ | ಹೋತ |

@KTBS NOT TO BE REPUBLISHED

ಆ) ಕೊಟ್ಟಿರುವ ವಾಕ್ಯಗಳನ್ನು ಓದಿಸಿ, ಬರೆಯಿಸಿ.

ಹುಡುಗರು ಟೋಪಿಯ ಆಟ ಆಡಿದರು.

ಮಳೆ ಮಳೆ ಮಳೆ, ಕೊಡೆ ಹಿಡಿದು ನಡೆ.

ಟೊಮೆಟೊ ಸಾರು ಬಲು ರುಚಿ.

ಡಮಡಮ ಡೋಲು, ಬಡಿದು ಕುಣಿದ ಬಾಲು.

@KTBS NOT TO BE REPUBLISHED

ಇ) ಚಿತ್ರಕ್ಕೆ ಬಣ್ಣ ತುಂಬಲು ತಿಳಿಸಿ.



# ಕಲಿತ ಗುಣಿತಾಕ್ಷರಗಳು

| ಹೆಸರು | ಉದಾಹರಣೆ | ಸ್ವರ ಚಿಹ್ನೆ | ಅಕ್ಷರ | ಪದ |
|---|---|---|---|---|
| ತಲೆಕಟ್ಟು | ಕ ಕ್ಕೆ ತಲೆಕಟ್ಟು | | ಕ | ಕರ |
| ಇಳಿ | ಕ ಕ್ಕೆ ಇಳಿ | ಾ | ಕಾ | ಕಾಗೆ |
| ಗುಡಿಸು | ಕ ಕ್ಕೆ ಗುಡಿಸು | ಿ | ಕಿ | ಕಿಟಕಿ |
| ಗುಡಿಸಿನ ದೀರ್ಘ | ಕ ಕ್ಕೆ ಗುಡಿಸಿನ ದೀರ್ಘ | ೀ | ಕೀ | ಕೀಟ |
| ಕೊಂಬು | ಕ ಕ್ಕೆ ಕೊಂಬು | ು | ಕು | ಕುರಿ |
| ಕೊಂಬಿನ ಇಳಿ | ಕ ಕ್ಕೆ ಕೊಂಬಿನಿಳಿ | ೂ | ಕೂ | ಕೂಸು |
| ವಟ‘ಋ’ ಸುಳಿ | ಕ ಕ್ಕೆ ವಟೃಸುಳಿ | ೃ | ಕೃ | ಕೃಪ |
| ಎತ್ವ | ಕ ಕ್ಕೆ ಎತ್ವ | ೆ | ಕೆ | ಕೆರೆ |
| ಏತ್ವ (ಎತ್ವನ ದೀರ್ಘ) | ಕ ಕ್ಕೆ ಎತ್ವನ ದೀರ್ಘ | ೇ | ಕೇ | ಕೇರೆ |
| ಐತ್ವ | ಕ ಕ್ಕೆ ಐತ್ವ | ೈ | ಕೈ | ಕೈ |
| ಒತ್ವ | ಕ ಕ್ಕೆ ಒತ್ವ | ೊ | ಕೊ | ಕೊಡೆ |
| ಓತ್ವ (ಒತ್ವನ ದೀರ್ಘ) | ಕ ಕ್ಕೆ ಓತ್ವನ ದೀರ್ಘ | ೋ | ಕೋ | ಕೋಳಿ |
| ಔತ್ವ | ಕ ಕ್ಕೆ ಔತ್ವ | ೌ | ಕೌ | ಕೌದಿ |
| ಅನುಸ್ವಾರ | ಕ ಕ್ಕೆ ಅನುಸ್ವಾರ | ಂ | ಕಂ | ಕಂಸ |
| ವಿಸರ್ಗ | ಕ ಕ್ಕೆ ವಿಸರ್ಗ | ಃ | ಕಃ | ಕಃ |

NOT TO BE REPUBLISHED @KTBS

# ಅಭ್ಯಾಸ

ಅ) ಚಿತ್ರ ತೋರಿಸಿ, ಪದ ಹೇಳಿಸಿ, ಬರೆಯಿಸಿ.



ಆಕಳು



ಇಣಚಿ (ಅಳಿಲು)



ಉಂಗುರ



ಅರಸ



ಎಲೆ



ಮರ



ಇಲಿ



ನೇಗಿಲು



ತೆನೆ

@KTBS NOT TO BE REPUBLISHED



ತಬಲ



ಮೇಜು



ನವಿಲು



ಭಟ



ಕುದುರೆ



ತಮಟೆ

@KTBS NOT TO BE REPUBLISHED



ಶಂಖ



ಹಾವು



ರೈತ



ಕೋತಿ



ನೌಕೆ



ನೊಣ



ಗೋಡೆ



ಚೇಳು



ಕೆರೆ



ಸೈನಿಕ



ಸೌಟು



ಕೋಳಿ

@KTBS NOT TO BE REPUBLISHED

# (ಪಾಠ – ೧೧ : ಪಾಠಪೂರ್ವ ಚಟುವಟಿಕೆ)

ಅ) ಈ ದಿನಾಂಕಗಳ ವಿಶೇಷವನ್ನು ಓದಿ ತಿಳಿಸಿ.

| | | |
|---|---|---|
| ಜನವರಿ ೧೨ |  | ಸ್ವಾಮಿ ವಿವೇಕಾನಂದರ ಜನುಮದಿನ |
| ಜನವರಿ ೨೬ |  | ಭಾರತದ ಗಣರಾಜ್ಯೋತ್ಸವ |
| ಏಪ್ರಿಲ್ ೧೪ |  | ಬಾಬಾ ಸಾಹೇಬ<br>ಡಾ. ಬಿ.ಆರ್. ಅಂಬೇಡ್ಕರ್‌ರವರ ಜನುಮದಿನ |
| ಆಗಸ್ಟ್ ೧೫ |  | ಭಾರತದ ಸ್ವಾತಂತ್ರ್ಯೋತ್ಸವ |

@KTBS NOT TO BE REPUBLISHED

| | | |
|---|---|---|
| ಸೆಪ್ಟೆಂಬರ್ ೫ |  | ಡಾ.ಎಸ್.ರಾಧಾಕೃಷ್ಣನ್‌ರವರ ಜನುಮದಿನ (ಶಿಕ್ಷಕರ ದಿನಾಚರಣೆ) |
| ಅಕ್ಟೋಬರ್ ೨ |  | ಮಹಾತ್ಮಾ ಗಾಂಧಿರವರ ಜನುಮದಿನ (ಮೋಹನದಾಸ ಕರಮಚಂದ ಗಾಂಧಿ) |
| ನವೆಂಬರ್ ೧ |  | ಕನ್ನಡ ರಾಜ್ಯೋತ್ಸವ |
| ನವೆಂಬರ್ ೧೪ |  | ಜವಾಹರಲಾಲ್ ನೆಹರುರವರ ಜನುಮದಿನ (ಮಕ್ಕಳ ದಿನಾಚರಣೆ) |
| ಡಿಸೆಂಬರ್ ೨೫ |  | ಯೇಸು ಕ್ರಿಸ್ತರ ಜನುಮದಿನ (ಕ್ರಿಸ್‌ಮಸ್ ದಿನ) |

@KTBS NOT TO BE REPUBLISHED

ಪಾಠ ೧೧

# ವಿವೇಕಾನಂದರ ಜನುಮ ದಿನ

(ಗದ್ಯ)

– ಸಮಿತಿ ರಚನೆ

G2R2D2

(ಈ ಪಾಠವನ್ನು ಓದಿ ಹೇಳಿ, ಓದಿಸಿ)



NOT TO BE REPUBLISHED ©KTBS

ಅದು ಒಂದು ಸರಕಾರಿ ಶಾಲೆ. ಆ ದಿನ ಸ್ವಾಮಿ ವಿವೇಕಾನಂದ ಅವರ ಜನುಮ ದಿನದ ಆಚರಣೆ. ಶಾಲೆಯ ತುಂಬ ಆ ದಿನ ಸಡಗರವೋ ಸಡಗರ. ರಹೀಮನು ಹೂವು ತಂದನು. ರಾಜನು ಮಾಲೆ ಮಾಡಿದನು. ಸ್ವಾಮಿ ವಿವೇಕಾನಂದರ ಪಟವು ಹೂಮಾಲೆಗಳಿಂದ ಕಂಗೊಳಿಸಿತು. ಶಾಂತಾರಾಮನು ದೇವರ ನಾಮ ಹಾಡಿದನು. ನಾರಾಯಣ ಗುರುಗಳು ದೀಪ ಬೆಳಗಿದರು.

ರೂಪ, ದೀಪ, ಫಾತಿಮಾ, ನಿಸಾರ್ ಹಾಗೂ ಸೀತಾ ಆ ದಿನದ ಆಚರಣೆ ಕುರಿತು ಭಾಷಣ ಮಾಡಿದರು. ಸಹನಾ ಕಥೆ ಹೇಳಿದಳು. ರಜನಿ ತಾನೇ ಬರೆದ ಕವಿತೆ ಓದಿದಳು.

ಗುರುಗಳಾದ ನಾರಾಯಣ ಅವರು "ಸ್ವಾಮಿ ವಿವೇಕಾನಂದರು ಭಾರತದ ಕೀರ್ತಿ ಪುರುಷರು. ಅವರು ಭಾರತದ ಹೆಸರನ್ನು ಬಾನೆತ್ತರಕ್ಕೆ ಎತ್ತಿ ಹಿಡಿದರು. ನಮ್ಮ ದೇಶದ ಬಗ್ಗೆ ವಿದೇಶದಲ್ಲಿ ಭಾಷಣ ಮಾಡಿ ಹೆಸರು ಗಳಿಸಿದರು. ಅವರನ್ನು ಜನರೆಲ್ಲರೂ 'ವೀರ ಸನ್ಯಾಸಿ' ಎಂದು ಕರೆಯುತ್ತಿದ್ದರು. ಅವರು ಭಾರತದ ಉದ್ದಗಲ ಸುತ್ತಿದರು. ಜನರಿಗೆ ತಿಳಿವಳಿಕೆ ನೀಡಿದರು. ಅವರು ಮಹಾನ್ ದೇಶಭಕ್ತರಾಗಿದ್ದರು. ಭಾರತವೆಂದರೆ ಅವರಿಗೆ ತುಂಬಾ ಹೆಮ್ಮೆ" ಎಂದು ಸ್ವಾಮಿ ವಿವೇಕಾನಂದರ ಗುಣಗಾನ ಮಾಡಿದರು.

ಪೀಟರ್ ವಂದಿಸಿದನು. ಮಾನಸ ಸಿಹಿ ತಿಂಡಿ ಹಂಚಿದಳು. ಹೀಗೆ ಸ್ವಾಮಿ ವಿವೇಕಾನಂದರ ಜನುಮ ದಿನದ ಆಚರಣೆ ಬಲು ಸೊಗಸಾಗಿ ನಡೆಯಿತು. ಭಾಗವಹಿಸಿದವರು ಸಂತಸದಿಂದ ಅವರವರ ಮನೆಗೆ ಮರಳಿದರು.

**ಓದಿದ ಪದಗಳು :**

ಸರಕಾರಿ, ಜನುಮ, ಆಚರಣೆ, ಸಡಗರ, ಹೂವು, ಮಾಲೆ, ಪಟ, ತಿಂಡಿ, ಭಾಷಣ, ಗುರುಗಳು, ಭಾರತ, ಪುರುಷ, ಉದ್ದಗಲ, ಸಿಹಿ, ಸಂತಸ, ಹೆಸರು, ದೀಪ, ದೇಶ, ಸೊಗಸು, ಗುಣಗಾನ, ಹಾಡು, ಕತೆ, ಕವಿತೆ, ಓದು, ಸಮಾರಂಭ, ಬಲು, ಭಾಗವಹಿಸು, ಹಂಚು, ಮರಳು.

@KTBS NOT TO BE REPUBLISHED

## ಅಭ್ಯಾಸ

**ಅ) ವಾಕ್ಯಗಳನ್ನು ಗುಂಡಾಗಿ ನಕಲು ಮಾಡಿಸಿ.**

೧. ಅದು ಒಂದು ಸರಕಾರಿ ಶಾಲೆ.

______________________________

______________________________

______________________________

______________________________

೨. ರಹೀಮನು ಹೂವು ತಂದನು.

೩. ಸಹನಾ ಕಥೆ ಹೇಳಿದಳು.

೪. ಮಾನಸ ಸಿಹಿ ಹಂಚಿದಳು.

@KTBS
NOT TO BE REPUBLISHED

**ಆ) ಕೇಳಿರುವ ಪ್ರಶ್ನೆಗಳನ್ನು ಓದಿ, ವಿದ್ಯಾರ್ಥಿಗಳಿಂದ ಓದಿಸಿ, ಉತ್ತರ ಕೇಳಿ ತಿಳಿಯಿರಿ ಮತ್ತು ಉತ್ತರ ಬರೆಯಿಸಿ.**

೧. ಶಾಲೆಯಲ್ಲಿ ಯಾರ ಜನುಮ ದಿನದ ಆಚರಣೆ ನಡೆಯಿತು?

೨. ರಾಜನು ಏನು ಮಾಡಿದನು?

೩. ನಾರಾಯಣ ಗುರುಗಳು ಏನನ್ನು ಬೆಳಗಿದರು?

೪. ಪೀಟರ್ ಏನು ಮಾಡಿದನು?

೫. ಸಿಹಿ ತಿಂಡಿ ಯಾರು ಹಂಚಿದರು?

@KTBS NOT TO BE REPUBLISHED

ಇ) ಬಿಟ್ಟಿರುವ ಪದಗಳನ್ನು ಗುರುತಿಸಲು ತಿಳಿಸಿ, ಖಾಲಿ ಜಾಗದಲ್ಲಿ ಬರೆಯಿಸಿ.

೧) ಅದು ಒಂದು ____________ ಶಾಲೆ.

೨) ಶಾಲೆಯ ತುಂಬ ಆ ದಿನ ____________ ಸಡಗರ.

೩) ಸ್ವಾಮಿ ವಿವೇಕಾನಂದರನ್ನು ಜನರು ______ ಎಂದು ಕರೆಯುತ್ತಿದ್ದರು.

೪) ಸಹನಾ ____________ ಹೇಳಿದಳು.

೫) ಮಾನಸ ____________ ಹಂಚಿದಳು.

ಈ) ಮಾದರಿಯಂತೆ ಮಕ್ಕಳಿಂದ ಬರೆಯಿಸಿ.

| | | | | |
|---|---|---|---|---|
| ಗುರುಗಳು<br>ರೂಪ<br>ದೀಪ<br>ನಿಸಾರ್ | ⇨ | ಭಾಷಣ | ⇨ | ಮಾಡಿದನು.<br>ಮಾಡಿದಳು.<br>ಮಾಡಿದರು. |

@KTBS NOT TO BE REPUBLISHED

**ಮಾದರಿ :** ಗುರುಗಳು ಭಾಷಣ ಮಾಡಿದರು.

೧. ____________________________________

೨. ____________________________________

೩. ____________________________________

ಉ) ಚಿತ್ರ ತೋರಿಸಿ, ಪದ ಹೇಳಿಸಿ, ದಿನಾಂಕ ತಿಳಿಸಿ, ಬರೆಯಿಸಿ.

| | | |
|---|---|---|
|  | ಬಸವ ಜಯಂತಿ | ದಿನಾಂಕ : |
|  | ಕನಕ ಜಯಂತಿ | ದಿನಾಂಕ : |
|  | ಮಹಾವೀರ ಜಯಂತಿ | ದಿನಾಂಕ : |
|  | ವಾಲ್ಮೀಕಿ ಜಯಂತಿ | ದಿನಾಂಕ : |
|  | ಬುದ್ಧ ಜಯಂತಿ | ದಿನಾಂಕ : |
|  | ಗುರುನಾನಕ್ ಜಯಂತಿ | ದಿನಾಂಕ : |

@KTBS
NOT TO BE REPUBLISHED

ಪಾಠ ೧೨

# ಒತ್ತಕ್ಷರಗಳು

(ಪಾಠಪೂರ್ವ ಚಟುವಟಿಕೆ) – ಸಮಿತಿ ರಚನೆ

## ಸಜಾತೀಯ ಒತ್ತಕ್ಷರಗಳು

ಚಿತ್ರ ತೋರಿಸಿ ಪದ ಹೇಳಿಸಿ.

| | | |
|---|---|---|
|  ಹಕ್ಕಿ |  ಮಗ್ಗ |  ಹಚ್ಚೆ |
|  ಅಜ್ಜ |  ಬೊಟ್ಟು |  ಗಡ್ಡ |
|  ಕತ್ತೆ |  ಹದ್ದು |  ಕನ್ನಡಿ |
|  ಕಪ್ಪೆ |  ಕಬ್ಬು |  ಕಮ್ಮಾರ |

© KTBS NOT TO BE REPUBLISHED

# ಒತ್ತಕ್ಷರಗಳು–೧

## ಸಜಾತೀಯ ಒತ್ತಕ್ಷರಗಳು

ಅ) ಈ ಒತ್ತಕ್ಷರಗಳನ್ನು ನಕಲು ಮಾಡಿಸಿ.

ಜ್ಜ ವ್ವ ಣ್ಣ ಖ್ಖ ಬ್ಬ

ಆ) ಒತ್ತಕ್ಷರಗಳ ಪದಗಳನ್ನು ಓದಿಸಿ, ನಕಲು ಮಾಡಿಸಿ.

ಅಜ್ಜ ಅವ್ವ ಅಣ್ಣ ಹಬ್ಬ ಬೆಟ್ಟ

ಮಜ್ಜನ ನವ್ವಾಲೆ ಸಣ್ಣಾಟ ಕಬ್ಬಿಣ

@KTBS NOT TO BE REPUBLISHED

# ಒತ್ತಕ್ಷರಗಳು–೨

ಅ) ಈ ಒತ್ತಕ್ಷರಗಳನ್ನು ನಕಲು ಮಾಡಿಸಿ.

ಕ್ಕ ಗ್ಗ ಚ್ಚ ಡ್ಡ ದ್ದ

ಆ) ಈ ಒತ್ತಕ್ಷರಗಳ ಪದಗಳನ್ನು ಓದಿಸಿ, ನಕಲು ಮಾಡಿಸಿ.

ಅಕ್ಕ ಮಗ್ಗ ಉಚ್ಚ ಗಡ್ಡ ಉದ್ದ

ಗುಗ್ಗರಿ ಹಚ್ಚಡ ಗಿಡ್ಡರು ಗದ್ದಲ

@KTBS NOT TO BE REPUBLISHED

# ಒತ್ತಕ್ಷರಗಳು–೩

ಅ) ಈ ಒತ್ತಕ್ಷರಗಳ ನಕಲು ಮಾಡಿಸಿ.

ಪ್ಪ ಸ್ಸ ಳ್ಳ

ಆ) ಈ ಒತ್ತಕ್ಷರಗಳ ಪದಗಳನ್ನು ಓದಿಸಿ, ನಕಲು ಮಾಡಿಸಿ.

ಅಪ್ಪ ಬಸ್ಸು ಹಳ್ಳ

ಅಪ್ಪುಗೆ ಬೆಳ್ಳುಳ್ಳಿ ತಪಸ್ಸು

@KTBS NOT TO BE REPUBLISHED

# ಒತ್ತಕ್ಷರಗಳು–೪

ಅ) ಈ ಒತ್ತಕ್ಷರಗಳನ್ನು ನಕಲು ಮಾಡಿಸಿ.

ತ್ತ ನ್ನ ಮ್ಮ ಯ್ಯ ಲ್ಲ

ಆ) ಈ ಒತ್ತಕ್ಷರಗಳ ಪದಗಳನ್ನು ಓದಿಸಿ, ನಕಲು ಮಾಡಿಸಿ.

ಬೆತ್ತ ಅನ್ನ ತಮ್ಮ ಅಯ್ಯ ಬೆಲ್ಲ

ಕತ್ತರಿ ಕನ್ನಡ ಹೆಮ್ಮರ ಉಯ್ಯಾಲೆ ಮಲ್ಲಿಗೆ

@KTBS NOT TO BE REPUBLISHED

# ಒತ್ತಕ್ಷರಗಳು–೫

## ವಿಜಾತೀಯ ಒತ್ತಕ್ಷರಗಳು

ಅ) ಈ ಒತ್ತಕ್ಷರಗಳ ಪದಗಳನ್ನು ಓದಿಸಿ, ನಕಲು ಮಾಡಿಸಿ.

ಕುಬ್ಜ ಇಷ್ಟ ಕಷ್ಟ ನಷ್ಟ

ಉತ್ಖನನ ವಿಜ್ಞಾನ ಸತ್ಕಾರ ಮುಷ್ಕರ

ಸತ್ಕವಿ ಖಡ್ಗ ಶಬ್ದ ಸ್ವಚ್ಛ

ಉದ್ಗಾರ ನಿಶ್ಚಯ ನಿಶ್ಚಲ ನಿಶ್ಚಿತ

@KTBS NOT TO BE REPUBLISHED

ಆಸ್ತಿ ಶಕ್ತಿ ಜಾಸ್ತಿ ಪುಸ್ತಕ

ಮಸ್ತಕ ಹಸ್ತ ಕುಸ್ತಿ ಉಚ್ಚಾರ

ಸನ್ಮಾನ ವಾಗ್ಮಿ ವಿಖ್ಯಾತ ಯೋಗ್ಯ

ದ್ರವ ಶ್ರವಣ ಕ್ರಮ ಪ್ರೀತಿ

ಪ್ರತಿಭೆ ಸ್ವಲ್ಪ ಸತ್ಯ ಸ್ಥಳ

@KTBS NOT TO BE REPUBLISHED

ನಾಲ್ಕು ನಮಸ್ಕಾರ ಧ್ರುವ ನಿತ್ಯ

ವ್ಯಾಯಾಮ ಬ್ಯಾಡ ಆರೋಗ್ಯ ಉದ್ಯಾನ

ಎಷ್ಟು ದೃಷ್ಟಿ ವಜ್ರ ದ್ರಾಕ್ಷಿ

@KTBS NOT TO BE REPUBLISHED

ಈ ಹೂವಿಗೆ ಮಕ್ಕಳಿಂದ ಬಣ್ಣ ತುಂಬಿಸಿ.



# ಒತ್ತಕ್ಷರಗಳು– ಅಭ್ಯಾಸ

ಅ) ಚಿತ್ರ ತೋರಿಸಿ ಪದ ಹೊಂದಿಸಿ ಬರೆಯಿಸಿ.

| ಅ | ಆ | ಇ |
|---|---|---|
|  | ____________ | ಕತ್ತರಿ |
|  | ____________ | ಸೊಳ್ಳೆ |
|  | ____________ | ಹಲ್ಲು |
|  | ____________ | ಲಡ್ಡು |
|  | ____________ | ಬಸ್ಸು |

@KTBS
NOT TO BE REPUBLISHED

ಆ) ಚಿತ್ರಕ್ಕೆ ಸರಿಹೊಂದುವ ಒತ್ತಕ್ಷರವುಳ್ಳ ಪದವನ್ನು ಬರೆಯಿಸಿ.

| | | |
|---|---|---|
|  |  |  |
|  |  |  |
|  |  |  |

@KTBS
NOT TO BE REPUBLISHED

ಇ) ಕೊಟ್ಟಿರುವ ವಾಕ್ಯಗಳನ್ನು ಓದಿಸಿ, ಬರೆಯಿಸಿ.

೧. ಅಜ್ಜಿಗೆ ಮಜ್ಜಿಗೆ ಎಂದರೆ ಅಚ್ಚುಮೆಚ್ಚು.

೨. ಚಿಕ್ಕಪ್ಪನು ತಕ್ಕಡಿಯಲ್ಲಿ ಬೆಳ್ಳುಳ್ಳಿಯನ್ನು ತೂಗಿದನು.

೩. ಅಕ್ಕಪಕ್ಕದ ಮನೆಯ ಚಿಕ್ಕಮಕ್ಕಳು ಹಗ್ಗಜಗ್ಗಾಟ ಆಡಿದರು.

೪. ಪುಟ್ಟಿ ಪುಟ್ಟ ಹಬ್ಬಕ್ಕಾಗಿ ಬಣ್ಣದ ಬಟ್ಟೆ ತೊಟ್ಟರು.

೫. ಅಪ್ಪ ಅಮ್ಮ ಗದ್ದೆಗೆ ಹೋದರು.

೬. ಅತ್ತೆಯು ಹಲ್ಲಿನಿಂದ ಬೆಲ್ಲವನ್ನು ಕಚ್ಚಿದರು.

@KTBS NOT TO BE REPUBLISHED

## (ಪಾಠ – ೧೩ : ಪಾಠಪೂರ್ವ ಚಟುವಟಿಕೆ)

ಅ) ಚಿತ್ರದಲ್ಲಿರುವ ಹಣ್ಣುಗಳ ಹೆಸರನ್ನು ಬರೆದು, ಸೂಕ್ತ ಬಣ್ಣ ತುಂಬಿಸಲು ಹೇಳಿ.

| | | |
|---|---|---|
|  |  |  |
| | | |
|  |  |  |
| | | |

ಆ) ಈ ನೋಟುಗಳ ಮುಖ ಬೆಲೆಯನ್ನು ಅಕ್ಷರಗಳಲ್ಲಿ ಬರೆಯಲು ಹೇಳಿ.

| | | | |
|---|---|---|---|
| ₹೧೦೦/– |  | ₹೨೦/– |  |
| ₹೫೦/– |  | ₹೧೦/– |  |

@KTBS NOT TO BE REPUBLISHED

F7Y8C2

# ಪಾಠ ೧೩ ಅಬ್ಬಾಸ್ ಹಣ್ಣಿನ ಅಂಗಡಿ (ಗದ್ಯ)

– ಸಮಿತಿ ರಚನೆ



NOT TO BE REPUBLISHED

(ಶಂಕರಣ್ಣ ತಮ್ಮ ಮಗಳು ಗೌರಿಯೊಂದಿಗೆ ಅಬ್ಬಾಸರ ಹಣ್ಣಿನ ಅಂಗಡಿಗೆ ಬರುತ್ತಾರೆ.)

**ಶಂಕರಣ್ಣ** – ನಮಸ್ಕಾರ ಅಬ್ಬಾಸ್ ಅಣ್ಣ

**ಗೌರಿ** – ನಮಸ್ತೆ, ಅಬ್ಬಾಸ್ ಅಂಕಲ್

**ಅಬ್ಬಾಸ್** – ನಮಸ್ಕಾರ ಶಂಕರಣ್ಣ ಬನ್ನಿ, ಬಾ ಗೌರಿ, ಏನು ಬೇಕು?

**ಶಂಕರಣ್ಣ** – ನಮಗೆ ಪರಂಗಿಹಣ್ಣು ಬೇಕು

**ಅಬ್ಬಾಸ್** – ಪರಂಗಿ ಒಂದಕ್ಕೆ ಇಪ್ಪತ್ತು ರೂಪಾಯಿ. ನಿಮಗೆ ಎಷ್ಟು ಪರಂಗಿ ಹಣ್ಣುಗಳು ಬೇಕು?

**ಶಂಕರಣ್ಣ** – ಒಂದು ಪರಂಗಿಹಣ್ಣು ಸಾಕು. ಈ ಮೂಸಂಬಿ ಹಣ್ಣಿನ ಬೆಲೆ ಎಷ್ಟು?

**ಅಬ್ಬಾಸ್** – ಮೂಸಂಬಿ ಒಂದಕ್ಕೆ ಐದು ರೂಪಾಯಿಗಳು.

**ಶಂಕರಣ್ಣ** – ಚೆನ್ನಾಗಿರುವ ಮೂರು ಮೂಸಂಬಿ ಹಣ್ಣುಗಳನ್ನು ಕೊಡಿ. ನಿಮ್ಮಲ್ಲಿ ಸೀಬೆಹಣ್ಣು ಇವೆಯೇ? ಬೆಲೆ ಎಷ್ಟು?

**ಅಬ್ಬಾಸ್** – ನೋಡಿ ಇಲ್ಲಿವೆ. ಸೀಬೆಹಣ್ಣು ಒಂದಕ್ಕೆ ಮೂರು ರೂಪಾಯಿ ಮಾತ್ರ. ಎಷ್ಟು ಹಣ್ಣುಗಳನ್ನು ಕೊಡಲಿ?

**ಗೌರಿ** – ಎರಡು ಸೀಬೆಹಣ್ಣು ಸಾಕು ಅಲ್ಲವೆ, ಅಪ್ಪಾ ?

**ಶಂಕರಣ್ಣ** – ಎರಡು ಸೀಬೆ ಹಣ್ಣು ಕೊಡಿ, ಇವು ಇಷ್ಟೇ ಸಾಕು. ಒಟ್ಟು ಎಷ್ಟು ರೂಪಾಯಿ ಆಯಿತು?

**ಅಬ್ಬಾಸ್** – ಎಲ್ಲ ಸೇರಿ ನಲವತ್ತೊಂದು ರೂಪಾಯಿ ಶಂಕರಣ್ಣ.

**ಶಂಕರಣ್ಣ** – ಇಗೋ, ಹಣವನ್ನು ತೆಗೆದುಕೊಳ್ಳಿ, ಆ ಹಣ್ಣುಗಳನ್ನು ಈ ಬಟ್ಟೆಯ ಚೀಲದಲ್ಲಿ ಹಾಕಿಬಿಡಿ.

**ಅಬ್ಬಾಸ್** – ಸರಿ, ಇಲ್ಲಿ ನೋಡಿ ನೀವು ಕೇಳಿದ ಎಲ್ಲ ಹಣ್ಣುಗಳನ್ನೂ ಹಾಕಿದ್ದೇನೆ. ಹಣ್ಣುಗಳು ಬೇಕಾದಾಗ ಬರುತ್ತಿರಿ ಶಂಕರಣ್ಣ.

**ಶಂಕರಣ್ಣ** – ಹಾಗೆಯೇ ಆಗಲಿ ಅಬ್ಬಾಸ್ ಅಣ್ಣ, ಬರುತ್ತೇವೆ.

(ಶಂಕರಣ್ಣ ತಮ್ಮ ಮಗಳು ಗೌರಿಯೊಂದಿಗೆ ಮನೆಗೆ ಹೋಗುತ್ತಾರೆ)

NOT TO BE REPUBLISHED ©KTBS

**ಓದಿಸಿ:**

ನಮಸ್ಕಾರ, ಅಣ್ಣ, ಪರಂಗಿಹಣ್ಣು, ಬೆಲೆ, ಎಷ್ಟು, ಮೂಸಂಬಿ, ರೂಪಾಯಿ, ಸೀಬೆ, ಚೆನ್ನಾಗಿರುವ, ನಲವತ್ತೊಂದು.

# ಅಭ್ಯಾಸ

**ಅ) ಈ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಿ, ಅವರಿಂದ ಉತ್ತರಗಳನ್ನು ಹೇಳಿಸಿ ಮತ್ತು ಬರೆಯಿಸಿ.**

೧. ಶಂಕರಣ್ಣನ ಮಗಳ ಹೆಸರೇನು?

___

___

೨. ಒಂದು ಪರಂಗಿ ಹಣ್ಣಿನ ಬೆಲೆ ಎಷ್ಟು?

___

___

೩. ಯಾವ ಹಣ್ಣಿನ ಬೆಲೆ ಮೂರು ರೂಪಾಯಿ?

___

___

೪. ಶಂಕರಣ್ಣ ಎಂತಹ ಮೂಸಂಬಿ ಹಣ್ಣನ್ನು ಕೇಳಿದರು?

___

___

@KTBS NOT TO BE REPUBLISHED

ಆ) ಕೆಲವು ಹಣ್ಣುಗಳ ಚಿತ್ರಗಳನ್ನು ನೀಡಲಾಗಿದೆ. ಮಕ್ಕಳಿಂದ ಅವುಗಳ ಹೆಸರನ್ನು ಹೇಳಿಸಿ, ಕೊಟ್ಟಿರುವ ಜಾಗದಲ್ಲಿ ಬರೆಯಿಸಿ.

| ಹಣ್ಣು | ಹೆಸರು |
|---|---|
|  | .......................................... |
|  | .......................................... |
|  | .......................................... |
|  | .......................................... |
|  | .......................................... |
|  | .......................................... |
|  | .......................................... |

@KTBS
NOT TO BE REPUBLISHED

**ಇ) ಕೊಟ್ಟಿರುವ ಅಂಕಿಗಳನ್ನು ಮಕ್ಕಳಿಂದ ಹೇಳಿಸಿ, ಅಕ್ಷರಗಳಲ್ಲಿ ಬರೆಯಿಸಿ.**

೧ – ___________

೨ – ___________

೩ – ___________

೪ – ___________

೫ – ___________

**ಈ) ಕೊಟ್ಟಿರುವ ಪದಗಳನ್ನು ಮಕ್ಕಳಿಂದ ಹೇಳಿಸಿ, ಅಂಕಿಗಳಲ್ಲಿ ಬರೆಯಿಸಿ.**

ಆರು ___________

ಏಳು ___________

ಎಂಟು ___________

ಒಂಬತ್ತು ___________

ಹತ್ತು ___________

@KTBS NOT TO BE REPUBLISHED

**ಉ) ಬಿಟ್ಟಿರುವ ಪದಗಳನ್ನು ಮಕ್ಕಳಿಂದ ಹೇಳಿಸಿ, ಬಿಟ್ಟಿರುವ ಜಾಗದಲ್ಲಿ ಬರೆಯಿಸಿ.**

೧. **ಪ್ರಶ್ನೆ** : ನಿನಗೆ ಯಾವ ಹಣ್ಣು ಇಷ್ಟ?

**ಉತ್ತರ** : ನನಗೆ _______________ ಹಣ್ಣು ಇಷ್ಟ.

೨. **ಪ್ರಶ್ನೆ** : ನೀನು ಯಾವ ಹಣ್ಣುಗಳನ್ನು ಮರದಲ್ಲಿ ನೋಡಿರುವೆ?

**ಉತ್ತರ** : ನಾನು _______________ ಹಣ್ಣುಗಳನ್ನು ಮರದಲ್ಲಿ ನೋಡಿರುವೆ.

೩. **ಪ್ರಶ್ನೆ :** ನೀನು ನೋಡಿರುವ ದೊಡ್ಡ ಗಾತ್ರದ ಹಣ್ಣು ಯಾವುದು?

**ಉತ್ತರ :** ನಾನು ನೋಡಿರುವ ದೊಡ್ಡ ಗಾತ್ರದ ಹಣ್ಣು ______________

೪. **ಪ್ರಶ್ನೆ :** ನೀನು ನೋಡಿರುವ ಚಿಕ್ಕ ಗಾತ್ರದ ಹಣ್ಣು ಯಾವುದು?

**ಉತ್ತರ :** ನಾನು ನೋಡಿರುವ ಚಿಕ್ಕ ಗಾತ್ರದ ಹಣ್ಣು ______________

**ಊ) ಮುಂದೆ ಕೆಲವು ಹೇಳಿಕೆಗಳನ್ನು ಅಂಕಣದಲ್ಲಿ ನೀಡಲಾಗಿದೆ. ಮಕ್ಕಳಿಂದ ಉತ್ತರಗಳನ್ನು ಹೇಳಿಸಿ, ಕೊಟ್ಟಿರುವ ಜಾಗಗಳಲ್ಲಿ ಬರೆಯಿಸಿ.**

| ಕ್ರಮ ಸಂಖ್ಯೆ | ವಿವರಣೆ | ನನ್ನದು | ಗೆಳೆಯನದು |
|---|---|---|---|
| ೧. | ಇಷ್ಟವಾದ ಹಣ್ಣು | | |
| ೨. | ಮರದಲ್ಲಿ ನೋಡಿರುವ ಹಣ್ಣು | | |
| ೩. | ದೊಡ್ಡ ಗಾತ್ರದ ಹಣ್ಣು | | |
| ೪. | ಚಿಕ್ಕ ಗಾತ್ರದ ಹಣ್ಣು | | |

@KTBS NOT TO BE REPUBLISHED

**ಋ) ಸೂಕ್ತ ಬಣ್ಣ ತುಂಬಿಸಲು ತಿಳಿಸಿ.**



# (ಪಾಠ – ೧೨ : ಪಾಠಪೂರ್ವ ಚಟುವಟಿಕೆ)

ಅ) ಈ ಸಾಕು ಪ್ರಾಣಿಗಳ ಹೆಸರನ್ನು ಓದಿ ತಿಳಿಸಿ.

| | | | | | |
|---|---|---|---|---|---|
| ಮೊಲ | ಹಸು | ಕುದುರೆ | ಪಾರಿವಾಳ | ಕೋಣ | ಗಿಳಿ |
| ಕೋಳಿ | ಕುರಿ | ನಾಯಿ | ಹುಂಜ | ಟಗರು | ಮೇಕೆ |

ಆ) ಮೇಲೆ ಓದಿದ ಪ್ರಾಣಿ ಮತ್ತು ಪಕ್ಷಿಗಳ ಹೆಸರನ್ನು ಆಯಾ ಚಿತ್ರದ ಕೆಳಗೆ ಬರೆಯಿಸಿ.

| | | |
|---|---|---|
|  ______ |  ______ |  ______ |
|  ______ |  ______ |  ______ |
|  ______ |  ______ |  ______ |
|  ______ |  ______ |  ______ |

© KTBS NOT TO BE REPUBLISHED

ಪಾಠ ೧೪

# ಮೊಲದ ಮರಿ (ಪದ್ಯ)

P4M7Q1

ಕವಿ: ಕೆಮ್ತೂರು ದೊಡ್ಡಣ್ಣ ಶೆಟ್ಟಿ

(ಈ ಪದ್ಯವನ್ನು ರಾಗವಾಗಿ ಹೇಳಿ, ಮಕ್ಕಳಿಂದ ಹೇಳಿಸಿ)



NOT TO BE REPUBLISHED

ಮೊಲದ ಮರಿ ಮೊಲದ ಮರಿ
ಆಡ ಬಾರೆ
ಚುಪುಕೆ ಚುಪುಕೆ ಚುಪುಕೆ ಚುಪುಕೆ
ನೆಗೆದು ಬಾರೆ

ಪೊದರಿನಿಂದ ಪೊದರ ಬಳಿಗೆ
ನಿನ್ನ ಆಟ
ಗಿಡದ ಚಿಗುರು ನಿತ್ಯ ನಿನಗೆ
ಸೊಗಸಿನೂಟ

ಗಿಡ್ಡ ಬಾಲ ದೊಡ್ಡ ಕಿವಿಯು
ನಿನಗೆ ಚಂದ
ಎದ್ದು ಎನ್ನ ಬಳಿಗೆ ಬಂದು
ಆಡೊ ಕಂದಾ

ಮುದ್ದು ಮುದ್ದು ಮಾತುಗಳನು
ನಿನಗೆ ಕಲಿಸುವೆ
ಮುದ್ದು ಮಾಡಿ ಪ್ರೀತಿಯಿಂದ
ನಿನ್ನ ಸಲಹುವೆ.

**ಓದಿಸಿ :**
**ಮೊಲ, ಮರಿ, ಆಡು, ಬಾರೆ, ಚುಪುಕೆ ಚುಪುಕೆ, ನೆಗೆದು, ಬಳಿ, ಆಟ, ಗಿಡ, ಚಿಗುರು, ನಿತ್ಯ, ಸೊಗಸು, ಊಟ, ಗಿಡ್ಡ, ಬಾಲ, ದೊಡ್ಡ, ಕಿವಿ, ಚಂದ, ಎದ್ದು, ಎನ್ನ, ಬಳಿಗೆ, ಆಡೊ, ಕಂದಾ, ಮುದ್ದು, ಮಾತು, ಕಲಿಸು, ಸಲಹು.**

© KTBS NOT TO BE REPUBLISHED

## ಅಭ್ಯಾಸ

**ಅ) ಕೇಳಿರುವ ಪ್ರಶ್ನೆಗಳನ್ನು ಓದಿ, ವಿದ್ಯಾರ್ಥಿಗಳಿಂದ ಓದಿಸಿ, ಉತ್ತರ ಕೇಳಿ ತಿಳಿಯಿರಿ ಮತ್ತು ಬರೆಯಿಸಿ.**

೧. ಮೊಲದ ಮರಿ ಹೇಗೆ ನೆಗೆದು ಬರುತ್ತದೆ?

________________________________

________________________________

೨. ಮೊಲದ ಊಟ ಯಾವುದು?

________________________________

________________________________

೩. ಮೊಲದ ಬಾಲ ಹೇಗಿದೆ?

________________________________

________________________________

೪. ಮೊಲದ ಕಿವಿಗಳು ಹೇಗಿವೆ?

______________________________________________

______________________________________________

೫. ಮೊಲ ಎಲ್ಲಿ ಆಡುತ್ತದೆ?

______________________________________________

______________________________________________

### ಆ) ಹೊಂದಿಸಿ ಹೇಳಿಸಿ, ಬರೆಯಿಸಿ.

೧. ಮುದ್ದು ಮಾತುಗಳನು – ನಿನಗೆ ಚೆಂದ ______________

೨. ಮೊಲದ ಮರಿ – ನೆಗೆದು ಬಾರೆ ______________

೩. ಚುಪುಕೆ ಚುಪುಕೆ – ಆಡ ಬಾರೆ ______________

೪. ದೊಡ್ಡ ಕಿವಿ – ನಿನಗೆ ಕಲಿಸುವೆ ______________

### ಇ) ಚಿತ್ರ ತೋರಿಸಿ, ಪದ ಬರೆಯಿಸಿ.

| | |
|---|---|
|  | ................................................................ |
|  | ................................................................ |
|  | ................................................................ |

@KTBS NOT TO BE REPUBLISHED

# ಪಾಠ ೧೫ ಶಂಕರಪ್ಪನ ಮನೆ (ಗದ್ಯ)

– ಸಮಿತಿ ರಚನೆ



© KTBS NOT TO BE REPUBLISHED

ಶಂಕರಪ್ಪನ ಮನೆ. ಸಂಜೆಯ ಸಮಯ. ಮನೆಯ ಬಾಗಿಲ ಬಳಿ ವೀಣಾ ನಿಂತಿದ್ದಳು. ಆಟವಾಡಲು ಅವಳು ಗೆಳೆಯರಿಗಾಗಿ ಕಾದಿದ್ದಳು. ಆಗ ಮಹಾದೇವ ಅವರು ಮನೆಗೆ ಬಂದರು.

ಮಹಾದೇವ ಅವರನ್ನು ನೋಡಿದ ವೀಣಾ ಸಂತಸಗೊಂಡಳು. "ಬನ್ನಿ ಚಿಕ್ಕಪ್ಪ, ಬನ್ನಿ" ಎಂದು ಮನೆಯೊಳಗೆ ಕರೆದುಕೊಂಡು ಹೋದಳು. ಕುಳಿತುಕೊಳ್ಳಲು ಹೇಳಿದಳು. ಕುಡಿಯಲು ನೀರು ತಂದುಕೊಟ್ಟಳು. "ಚಿಕ್ಕಪ್ಪ ಚೆನ್ನಾಗಿದ್ದೀರಾ?" ಎಂದು ಪ್ರೀತಿಯಿಂದ ಮಾತನಾಡಿಸಿದಳು. "ಚಿಕ್ಕಮ್ಮ ಮತ್ತು ತಮ್ಮನ

ಆರೋಗ್ಯ ಹೇಗಿದೆ?" ಎಂದು ಕೇಳಿದಳು. ವೀಣಾಳ ಮಾತುಗಳನ್ನು ಕೇಳಿ ಚಿಕ್ಕಪ್ಪನಿಗೆ ಸಂತಸವಾಯಿತು.

ಮಹಾದೇವ ಅವರು ಅಣ್ಣ ಶಂಕರಪ್ಪನವರನ್ನು ಗೃಹಪ್ರವೇಶಕ್ಕೆ ಆಮಂತ್ರಿಸಿದರು. ಸ್ವಲ್ಪ ಹೊತ್ತು ಅಲ್ಲೇ ಇದ್ದು, ಆನಂತರ ತಮ್ಮ ಮನೆಗೆ ಹೊರಡಲು ಸಿದ್ಧರಾದರು.

ವೀಣಾ ಚಿಕ್ಕಪ್ಪನಿಗೆ ನಮಸ್ಕಾರ ಮಾಡಿದಳು. "ಇನ್ನೊಮ್ಮೆ ಬರುವಾಗ ಚಿಕ್ಕಮ್ಮನನ್ನೂ ತಮ್ಮನನ್ನೂ ಕರೆದುಕೊಂಡು ಬನ್ನಿ" ಎಂದು ಹೇಳಲು ಮರೆಯಲಿಲ್ಲ.

**ಓದಿಸಿ :**

**ಸಮಯ, ಚಿಕ್ಕಪ್ಪ, ಒಳಗೆ, ಸಂತಸ, ಕುಡಿ, ನೀರು, ಪ್ರೀತಿ, ಚಿಕ್ಕಮ್ಮ, ತಮ್ಮ, ಆರೋಗ್ಯ, ಅವರು, ಹತ್ತಿರ, ಸ್ವಲ್ಪ, ಹೊತ್ತು, ಅಲ್ಲೇ, ಸಿದ್ಧರಾಗು, ನಮಸ್ಕಾರ, ಇನ್ನೊಮ್ಮೆ, ಮರೆ.**

@KTBS NOT TO BE REPUBLISHED

## ಅಭ್ಯಾಸ

**ಅ) ಸರಳ ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಿ, ಅವರಿಂದ ಉತ್ತರಗಳನ್ನು ಬರೆಯಿಸಿ.**

೧) ಯಾರನ್ನು ನೋಡಿ ವೀಣಾ ಸಂತಸಗೊಂಡಳು?

೨) ವೀಣಾ ಚಿಕ್ಕಪ್ಪನಿಗೆ ಕುಡಿಯಲು ಏನು ತಂದುಕೊಟ್ಟಳು?

೩) ಯಾರ ಮಾತನ್ನು ಕೇಳಿ ಚಿಕ್ಕಪ್ಪನಿಗೆ ಸಂತಸವಾಯಿತು?

@KTBS NOT TO BE REPUBLISHED

೪) ವೀಣಾ ಯಾರನ್ನು ಕರೆದುಕೊಂಡು ಬನ್ನಿ ಎಂದು ಹೇಳುವುದನ್ನು ಮರೆಯಲಿಲ್ಲ?

ಆ) ನೀಡಿರುವ ವಾಕ್ಯಗಳನ್ನು ಯಾರು ಯಾರಿಗೆ ಹೇಳಿದರು/ ಕೇಳಿದರು ಎಂದು ಮಕ್ಕಳಿಗೆ ಕೇಳಿ, ಉತ್ತರ ಪಡೆಯಿರಿ ಮತ್ತು ಬರೆಯಿಸಿ.

೧) "ಬನ್ನಿ ಚಿಕ್ಕಪ್ಪ ಬನ್ನಿ"

- ಈ ಮಾತನ್ನು ಯಾರು ಹೇಳಿದರು?

______________________________

______________________________

- ಯಾರನ್ನು ಕುರಿತು ಹೇಳಿದರು?

______________________________

______________________________

ಇ) ನೀಡಿರುವ ವಾಕ್ಯಗಳಲ್ಲಿ ಒಂದೊಂದು ಪದ ಬಿಡಲಾಗಿದೆ. ಆವರಣದಿಂದ ಸೂಕ್ತ ಪದವನ್ನು ಆರಿಸಿ ವಾಕ್ಯವನ್ನು ಪೂರ್ಣಗೊಳಿಸಲು ತಿಳಿಸಿ.

೧) ವೀಣಾ ಚಿಕ್ಕಪ್ಪನಿಗೆ ಕುಡಿಯಲು ____________ ತಂದುಕೊಟ್ಟಳು.
(ನೀರು, ಹಾಲು, ಕಾಫಿ)

೨) ಮಹಾದೇವ ಅವರು ____________ ಶಂಕರಪ್ಪನವರನ್ನು ಗೃಹ ಪ್ರವೇಶಕ್ಕೆ ಆಹ್ವಾನಿಸಿದರು.
(ಅಣ್ಣ, ತಮ್ಮ, ದೊಡ್ಡಪ್ಪ)

@KTBS NOT TO BE REPUBLISHED

# ಪಾಠ ೧೬ ಕೈ ತೊಳೆಯಬೇಕು (ಗದ್ಯ)

F5L9W8

– ಸಮಿತಿ ರಚನೆ

(ಪಾಠವನ್ನು ಓದಿ ಹೇಳಿ, ಮಕ್ಕಳಿಂದ ಓದಿಸಿ)



ಸಂಜೆ ಆಯಿತು. ಆಶಾ ಮತ್ತು ಉದಯ ಶಾಲೆಯಿಂದ ಮನೆಗೆ ಬಂದರು. ಅಮ್ಮ ಬಾಗಿಲಲ್ಲಿ ಕಾಯುತ್ತ ನಿಂತಿದ್ದರು. ಮನೆಗೆ ಬರುತ್ತಲೆ ಉದಯನಿಗೆ ತುಂಬಾ ಹಸಿವು.

**ಉದಯ** : ಅಮ್ಮಾ ತಿನ್ನಲು ತಿಂಡಿ ಕೊಡು.

**ಆಶಾ** : ಅಮ್ಮಾ.. ಉದಯ ಕೈಕಾಲು ತೊಳೆದಿಲ್ಲ.

**ಉದಯ** : ನನಗೆ ಹಸಿವಾಗುತ್ತಿದೆ. ಮೊದಲು ತಿಂಡಿ ತಿನ್ನುವೆ.

**ಅಮ್ಮ** : ಬೇಡ, ಮೊದಲು ಕೈ ಕಾಲು ತೊಳೆ.

**ಉದಯ** : ಕೈ ಏಕೆ ತೊಳೆಯಬೇಕು?

**ಅಮ್ಮ** : ನಿನ್ನ ಕೈ ಕೊಳಕು ಆಗಿರುತ್ತದೆ. ಕೊಳಕು ಕೈಯಿಂದ ತಿಂದರೆ ಆರೋಗ್ಯ ಕೆಡುತ್ತದೆ.

**ಆಶಾ** : ಹೊರಗಿನ ವಸ್ತುಗಳನ್ನು ಮುಟ್ಟಿದಾಗ ಕೈಯಲ್ಲಿ ರೋಗಾಣುಗಳು ಸೇರುತ್ತವಂತೆ. ಚೆನ್ನಾಗಿ ಕೈತೊಳೆದರೆ ಕೈ ಶುಚಿಯಾಗುತ್ತದೆ.

**ಅಮ್ಮ** : ಹೋಗು, ಕೈ ತೊಳೆದು ಬಾ.

**ಆಶಾ** : ತಿಳಿಯಿತಾ ಉದಯ? ತಿನ್ನುವ ಮೊದಲು ಕೈ ತೊಳೆಯಲೇ ಬೇಕು. ಅದರಿಂದ ನಮ್ಮ ಆರೋಗ್ಯ ಚೆನ್ನಾಗಿರುತ್ತದೆ.

**ಉದಯ** : ಸರಿ, ನಾನು ಈಗಲೇ ಕೈ ತೊಳೆಯುತ್ತೇನೆ.

**ಅಮ್ಮ** : ನನ್ನ ಮಕ್ಕಳು ಬುದ್ಧಿವಂತರು. ನನ್ನ ಮಕ್ಕಳು ಆರೋಗ್ಯವಂತರು.

ಆಶಾ, ಉದಯ ಕೈಕಾಲು ಮುಖ ತೊಳೆದರು. ಅಮ್ಮ ತಿಂಡಿ, ಹಾಲು ಕೊಟ್ಟರು. ಮಕ್ಕಳು ತಿಂಡಿ ತಿಂದರು. ಹಾಲು ಕುಡಿದರು.

@KTBS NOT TO BE REPUBLISHED

**ಓದಿಸಿ :**

ಸಂಜೆ, ಆಯಿತು, ಶಾಲೆ, ಬಾಗಿಲು, ನಗುತ್ತಾ, ಹಸಿವು, ತಿನ್ನಲು, ತಿಂಡಿ, ಕೈಕಾಲು, ತೊಳೆ, ಮುಖ, ಕೊಳಕು, ರೋಗಾಣು, ಶುಚಿ, ಬುದ್ಧಿವಂತ, ಆರೋಗ್ಯವಂತ, ಹಾಲು.

## ಅಭ್ಯಾಸ

**ಅ) ಈ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಿ, ಅವರಿಂದ ಉತ್ತರಗಳನ್ನು ಬರೆಯಿಸಿ.**

೧) ತಿಂಡಿ ತಿನ್ನುವ ಮೊದಲು ಏನನ್ನು ತೊಳೆದುಕೊಳ್ಳಬೇಕು?

______________________

______________________

______________________

______________________

೨) ಕೊಳಕಾದ ಕೈಯಿಂದ ತಿಂದರೆ ಏನು ಕೆಡುತ್ತದೆ?

______________________________

______________________________

೩) ಅಮ್ಮ ತನ್ನ ಮಕ್ಕಳಿಗೆ ಏನು ಕೊಟ್ಟಳು?

______________________________

______________________________

**ಆ) ದೇಹದ ಕೆಲವು ಅಂಗಾಂಗಗಳ ಹೆಸರುಗಳನ್ನು ನೀಡಲಾಗಿದೆ. ಮಕ್ಕಳಿಂದ ಅವುಗಳನ್ನು ಹೇಳಿಸಿ, ಕೊಟ್ಟಿರುವ ಜಾಗಗಳಲ್ಲಿ ನಾಲ್ಕು ಸಲ ಬರೆಯಿಸಿ.**

@KTBS NOT TO BE REPUBLISHED

೧. ಕೈ ______________________________

೨. ಕಾಲು ______________________________

೩. ಬೆರಳು ______________________________

೪. ಮೈ ______________________________

೫. ತೋಳು ______________________________

೬. ಮುಖ ______________________________

೭. ಕಣ್ಣು ________________

೮. ಮೂಗು ________________

೯. ಬಾಯಿ ________________

೧೦. ಹಲ್ಲು ________________

ಇ) ದಿನನಿತ್ಯ ತೊಳೆಯಬೇಕಾದ ಅಂಗಗಳ ಹೆಸರನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಬರೆಯಿಸಿ.

| | | | |
|---|---|---|---|
| ಕೈ | ಕಾಲು | ಮೈ | ಹೃದಯ |
| ಬಾಯಿ | ಹಲ್ಲು | ಮೂಗು | ಶ್ವಾಸಕೋಶ |
| ಜಠರ | ರಕ್ತನಾಳ | ಕಣ್ಣು | ಮುಖ |

@KTBS NOT TO BE REPUBLISHED

ಈ) ಕೊಟ್ಟಿರುವ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿಸಲು ತಿಳಿಸಿ.

೧) ಅಮ್ಮಾ ತಿನ್ನಲು ____________ ಕೊಡು.

೨) ಮೊದಲು ____________ ತಿನ್ನುವೆ.

೩) ಕೊಳಕು ಕೈಯಿಂದ ತಿಂದರೆ ____________ ಕೆಡುತ್ತದೆ.

೪) ನನ್ನ ಮಕ್ಕಳು ____________

# ಪಾಠ ೧೭ ಸಿಗಡಿ ಯಾಕೆ ಒಣಗಲಿಲ್ಲ? (ಗದ್ಯ)

U7D5W1

– ಪಂಜೆ ಮಂಗೇಶರಾಯರು

(ಈ ಪಾಠವನ್ನು ಓದಿ ಹೇಳಿ, ಓದಿಸಿ, ಅಭಿನಯ ಮಾಡಿಸಿ)

ಒಂದು ಊರಲ್ಲಿ ಕಡಲಿನ ದಡದ ಮೇಲೆ ಒಂದು ಗುಡಿಸಲು ಇತ್ತು. ಅದರಲ್ಲಿ ಒಬ್ಬ ಬೆಸ್ತನು, ಅವನ ಹೆಂಡತಿ, ಅವನ ಮಗು, ಅವನ ಅಜ್ಜಿ – ಹೀಗೆ ನಾಲ್ವರು ವಾಸವಾಗಿದ್ದರು. ಕಡಲಿಗೆ ಹೋಗಿ ಮೀನು ಹಿಡಿಯುವುದು ಆ ಬೆಸ್ತನ ಕೆಲಸ. ಅವನು ಹಿಡಿದು ತಂದ ಮೀನನ್ನು ಪೇಟೆಗೆ ಕೊಂಡುಹೋಗಿ ಮಾರುವುದು ಅವನ ಹೆಂಡತಿಯ ಕೆಲಸ. ಅವಳು ಮಾರಿ ಉಳಿದ ಮೀನನ್ನು ಬಿಸಿಲಿಗೆ ಹಾಕಿ ಒಣಗಿಸುವುದು ಅಜ್ಜಿಯ ಕೆಲಸ. ಅಳುತ್ತಾ ಇರುವುದು ಮಗುವಿನ ಕೆಲಸ.

ಹೀಗಿರಲು ಒಂದು ದಿನ ಆ ಬೆಸ್ತನು ಬಲೆಯನ್ನು ತೆಗೆದುಕೊಂಡು, ಸಣ್ಣ ದೋಣಿಯಲ್ಲಿ ಕೂತುಕೊಂಡು ಮೀನು ಹಿಡಿಯುವುದಕ್ಕೆ ಸಮುದ್ರಕ್ಕೆ ಹೋದನು. ಅವನ ಹೆಂಡತಿಯು ಮೀನು ಮಾರುವುದಕ್ಕೆ ಪೇಟೆಗೆ ಹೋದಳು. ಮನೆಯಲ್ಲಿ ಅಜ್ಜಿಯು ಮೀನನ್ನು ಬಿಸಿಲಿಗೆ ಹಾಕಿ ಒಣಗಿಸುತ್ತಿದ್ದಳು. ಬೆಸ್ತನ ಮಗುವು ಒಂದು ಚಾಪೆಯ ಮೇಲೆ ಅಳುತ್ತಾ ಇತ್ತು. ಮುದುಕಿಯು ಜಗುಲಿಯ ಮೇಲೆ ಕೂತುಕೊಂಡು ಒಂದು ಕೈಯಿಂದ ಮಗುವಿನ ಬೆನ್ನನ್ನು ತಟ್ಟುತ್ತಾ, ಮತ್ತೊಂದು ಕೈಯಿಂದ ಕಾಗೆಗಳನ್ನು ಅಟ್ಟುತ್ತಾ ಇದ್ದಳು.

ಹೊತ್ತು ಇಳಿಯಿತು. ಸಮುದ್ರಕ್ಕೆ ಹೋದ ಬೆಸ್ತನೂ, ಪೇಟೆಗೆ ಹೋದ ಅವನ ಹೆಂಡತಿಯೂ ಮನೆಗೆ ಬರುವ ಹೊತ್ತಾಯಿತು. ಆಗ ಮುದುಕಿಯು "ಬಿಸಿಲು ಇಳಿಯಿತು. ಇನ್ನು ಈ ಸಿಗಡಿ ಮೀನನ್ನು ಗೋರಿ, ಒಳಗೆ ತರುತ್ತೇನೆ" ಎಂದು ಹೇಳಿ, ಅಂಗಳಕ್ಕೆ ಇಳಿದು ಸಿಗಡಿ ಮೀನನ್ನು ಮುಟ್ಟಿ ನೋಡಿದಳು. ಸಿಗಡಿ ಒಣಗಿರಲಿಲ್ಲ.



ಆಗ ಆ ಮುದುಕಿ "ಸಿಗಡೀ, ಸಿಗಡೀ, ನೀನು ಯಾಕೆ ಒಣಗಲಿಲ್ಲ?" ಎಂದು ಕೇಳಿದಳು.

ಅದಕ್ಕೆ ಸಿಗಡಿ "ಅಜ್ಜೀ ಅಜ್ಜೀ, ಹುಲ್ಲು ಬೆಳೆದು ಬಿಸಿಲು ತಾಗದೆ ಇದ್ದರೆ, ನಾನು ಹೇಗೆ ಒಣಗಲಿ? ನೀನು ನನ್ನನ್ನು ಯಾಕೆ ಕೇಳುತ್ತೀ? ಹುಲ್ಲನ್ನು ಕೇಳು" ಎಂದಿತು.

© KTBS NOT TO BE REPUBLISHED

ತರುವಾಯ ಮುದುಕಿ ಹುಲ್ಲಿನ ಬಳಿಗೆ ಹೋಗಿ "ಹುಲ್ಲೇ, ಹುಲ್ಲೇ, ನೀನು ಯಾಕೆ ಬಿಸಿಲಿಗೆ ಅಡ್ಡವಾದೀ?" ಎಂದು ಕೇಳಿದಳು.

ಅದಕ್ಕೆ ಹುಲ್ಲು "ಅಜ್ಜೀ ಅಜ್ಜೀ, ಕರು ನನ್ನನ್ನು ತಿನ್ನದೆ ಇದ್ದರೆ, ನಾನು ಏನು ಮಾಡಲಿ? ನೀನು ನನ್ನನ್ನು ಯಾಕೆ ಕೇಳುತ್ತೀ? ಕರುವನ್ನು ಕೇಳು" ಎಂದಿತು.

ತರುವಾಯ ಮುದುಕಿ ಕರುವಿನ ಬಳಿಗೆ ಹೋಗಿ "ಕರುವೇ, ಕರುವೇ, ನೀನು ಯಾಕೆ ಹುಲ್ಲು ತಿನ್ನಲಿಲ್ಲ?" ಎಂದು ಕೇಳಿದಳು.

ಅದಕ್ಕೆ ಕರುವು "ಅಜ್ಜೀ ಅಜ್ಜೀ, ಮನೆಯ ಹೆಣ್ಣು ನನ್ನನ್ನು ಬಿಚ್ಚಿ ಬಿಡದಿದ್ದರೆ, ನಾನು ಹೇಗೆ ಹುಲ್ಲು ತಿನ್ನಲಿ? ನೀನು ನನ್ನನ್ನು ಯಾಕೆ ಕೇಳುತ್ತೀ? ಹೆಣ್ಣನ್ನು ಕೇಳು" ಎಂದಿತು.

ಅಷ್ಟರಲ್ಲಿ ಆ ಬೆಸ್ತನ ಹೆಂಡತಿ ಮನೆಗೆ ಬಂದಳು. ಆಗ ಮುದುಕಿ ಅವಳ ಬಳಿಗೆ ಹೋಗಿ, "ಹೆಣ್ಣೇ, ಹೆಣ್ಣೇ, ನೀನು ಕರುವನ್ನು ಯಾಕೆ ಬಿಚ್ಚಿ ಬಿಡಲಿಲ್ಲ?" ಎಂದು ಕೇಳಿದಳು.

ಅದಕ್ಕೆ ಬೆಸ್ತ ಹೆಂಡತಿ "ಅಜ್ಜೀ ಅಜ್ಜೀ, ಮಗು ಅಳುವುದನ್ನು ನಿಲ್ಲಿಸದೆ ಇದ್ದರೆ, ನಾನು ಹೇಗೆ ಕರುವನ್ನು ಬಿಚ್ಚಿ ಬಿಡಲಿ? ನೀನು ನನ್ನನ್ನು ಯಾಕೆ ಕೇಳುತ್ತೀ? ಮಗುವನ್ನು ಕೇಳು" ಎಂದಳು.

ತರುವಾಯ ಮುದುಕಿ ಮಗುವಿನ ಬಳಿಗೆ ಹೋಗಿ, "ಮಗುವೇ, ಮಗುವೇ? ನೀನು ಯಾಕೆ ಅಳುವುದನ್ನು ನಿಲ್ಲಿಸಲಿಲ್ಲ?" ಎಂದು ಕೇಳಿದಳು.

ಅದಕ್ಕೆ ಮಗು "ಅಜ್ಜೀ ಅಜ್ಜೀ, ಇರುವೆ ನನ್ನನ್ನು ಕಚ್ಚಿದರೆ ನಾನೇನು ಮಾಡಲಿ? ನೀನು ನನ್ನನ್ನು ಯಾಕೆ ಕೇಳುತ್ತೀ? ಇರುವೆಯನ್ನು ಕೇಳು" ಎಂದಿತು.

ತರುವಾಯ ಮುದುಕಿಯು ಇರುವೆಯ ಬಳಿಗೆ ಹೋಗಿ, "ಇರುವೆಯೇ, ಇರುವೆಯೇ ನೀನು ಯಾಕೆ ಮಗುವನ್ನು ಕಚ್ಚಿದೆ?" ಎಂದು ಕೇಳಿದಳು.

ಅದಕ್ಕೆ ಇರುವೆ "ಅಜ್ಜೀ ಅಜ್ಜೀ, ಮಗುವಿನ ಚಾಪೆ ನನ್ನನ್ನು ತಡೆದರೆ ನಾನೇನು ಮಾಡಲಿ? ನೀನು ಚಾಪೆಯನ್ನು ಮಡಚಿ, ನನಗೆ ಹೋಗಲಿಕ್ಕೆ ಬಿಡು. ನಾನು ಕಚ್ಚುವುದಿಲ್ಲ" ಎಂದಿತು.

ಆಮೇಲೆ ಮುದುಕಿ ಮಗುವನ್ನು ಎತ್ತಿಕೊಂಡು ಚಾಪೆಯನ್ನು ಮಡಚಿದಳು. ಇರುವೆ ಕಚ್ಚದೆ ಹೊರಟುಹೋಯಿತು. ಮಗುವು ಅಳುವುದನ್ನು ನಿಲ್ಲಿಸಿತು. ಮಗುವಿನ ತಾಯಿ ಕರುವನ್ನು ಬಿಚ್ಚಿ ಬಿಡಿಸಿದಳು. ಕರು ಹುಲ್ಲನ್ನು ತಿಂದಿತು. ಆಮೇಲೆ ಬಿಸಿಲು ಬಿದ್ದು ಮೀನು ಒಣಗಿತು. ಮುದುಕಿ ಸಿಗಡಿಯನ್ನು ಗೋರಿ ಒಳಗೆ ತೆಗೆದುಕೊಂಡು ಹೋದಳು.

© KTBS NOT TO BE REPUBLISHED

**ಓದಿಸಿ :**

**ಕಡಲು, ದಡ, ಗುಡಿಸಲು, ಬೆಸ್ತ, ಬಲೆ, ದೋಣಿ, ಸಮುದ್ರ, ಕಾಗೆ, ಪೇಟೆ, ಬಿಸಿಲು, ಒಣಗು, ಹೆಣ್ಣು, ಕರು, ಬಿಚ್ಚಿ, ಅಟ್ಟು, ಸಿಗಡಿ, ಅಡ್ಡ, ಕಚ್ಚು, ಇರುವೆ, ಮಡಚಿ, ಚಾಪೆ, ಮುದುಕಿ.**

## ಅಭ್ಯಾಸ

### ಅ) ಪದಗಳ ಅರ್ಥ.

ಕಡಲು – ಸಮುದ್ರ

ಬೆಸ್ತ – ಮೀನು ಹಿಡಿಯುವವನು

ಪೇಟೆ – ಮಾರುವ ಜಾಗ

ಜಗುಲಿ – ಮನೆಯ ಹೊರಗೆ ಜನರು ಕೂರಲು ಇರುವ ಜಾಗ

ಸಿಗಡಿ – ಒಂದು ಬಗೆಯ ಮೀನು

### ಅ) ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಪದಗಳನ್ನು ಖಾಲಿ ಜಾಗದಲ್ಲಿ ಬರೆಯಿಸಿ.

1. ಒಂದು ಊರಲ್ಲಿ _____ ದಡದ ಮೇಲೆ ಒಂದು ಗುಡಿಸಲು ಇತ್ತು.
2. ____ ಇರುವುದು ಮಗುವಿನ ಕೆಲಸ.

### ಆ) ಕೇಳಿರುವ ಪ್ರಶ್ನೆಗಳನ್ನು ಓದಿ, ವಿದ್ಯಾರ್ಥಿಗಳಿಂದ ಓದಿಸಿ, ಉತ್ತರಗಳನ್ನು ಕೇಳಿ ತಿಳಿಯಿರಿ ಮತ್ತು ಉತ್ತರ ಬರೆಯಿಸಿ.

೧) ಬೆಸ್ತನ ಕೆಲಸ ಏನು?

______________________________

______________________________

೨) ಅಜ್ಜಿಯು ಬಿಸಿಲಿನಲ್ಲಿ ಏನನ್ನು ಒಣಗಿಸುತ್ತಿದ್ದಳು?

______________________________

______________________________

©KTBS NOT TO BE REPUBLISHED

೩) ಸಿಗಡಿ ಯಾಕೆ ಒಣಗಲಿಲ್ಲ?

________________________________

________________________________

೪) ಹೆಣ್ಣು ಕರುವನ್ನು ಯಾಕೆ ಬಿಚ್ಚಿ ಬಿಡಲಿಲ್ಲ?

________________________________

________________________________

**ಇ) ಕೊಟ್ಟಿರುವ ಪ್ರಾಸ ಪದಗಳನ್ನು ಓದಿಸಿ ಮತ್ತು ಬರೆಯಿಸಿ.**

೧) ಮೀನು – ನಾನು

__________ __________

__________ – __________

೨) ಮಗು – ನಗು

__________ __________

__________ – __________

೩) ಕೇಳು – ಹೇಳು

__________ __________

__________ – __________

೪) ಕಚ್ಚು – ಬಿಚ್ಚು

__________ __________

__________ – __________

@KTBS NOT TO BE REPUBLISHED

**ಈ) ನೀಡಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ವಾಕ್ಯಗಳನ್ನು ಪೂರ್ಣಗೊಳಿಸಲು ತಿಳಿಸಿ.**

೧) ಬೆಸ್ತನು ______ ತೆಗೆದುಕೊಂಡು ಸಮುದ್ರಕ್ಕೆ ಹೋದನು.

೧) ಮೀನು    ೨) ಕರು    ೩) ಬಲೆ

೨) ಕರು ______ ತಿನ್ನಲಿಲ್ಲ.

೧) ಹುಲ್ಲು    ೨) ಹಿಂಡಿ    ೩) ಊಟ

೩) ಹುಲ್ಲು ಬೆಳೆದು ______ ತಾಗಲಿಲ್ಲ.

೧) ನೆರಳು    ೨) ಮಳೆ    ೩) ಬಿಸಿಲು

@KTBS
NOT TO BE REPUBLISHED

# ಟಿಪ್ಪಣಿ

@KTBS
NOT TO BE REPUBLISHED

# ಟಿಪ್ಪಣಿ

@KTBS
NOT TO BE REPUBLISHED